"SATYAVADI" Founded 1917 Regd. No. M. 1299

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು.)

ಸಂಪುಟ 29 ಸಂಚಿಕೆ 22 ] ಮಂಗಳವಾರ 9—10—45 [ ಬಿಡಿ ಪ್ರತಿ 3 ಪೈ

## ಪೋಲಿಸನಿಗೆ ಅರ್ಧಚಂದ್ರ

ತಾ. ೧೦—೮—೪೫ನೇ ದಿನ ಯಂದೇಬೂಟಿನ ವೇಲಿ ಸೆಂಕ ಹೆಸರಿನ ವಿದ್ಯಾರ್ಥಿಗೆ ಪೋಲಿಸ ಕಾನಸ್ಟೇಬಲ ರಹಿಮತುಲ್ಲಾ ಮಿಯಾ ಇವನು ಜೊತೆದದ್ದರ ಚೌಕಶಿಯಾಗಿ ಡಿ. ಎಸ್. ಪಿ ಯವರು ಅವನನ್ನು ನೋಕರಿ ಮೇಲಿಂದ ತೆಗೆದುಹಾಕಿದರೆಂದು ತಿಳಿಯುತ್ತದೆ.

## ವಸ್ತು ಪ್ರದರ್ಶನಾಲಯದ ವಿಶೇಷ ಸುದ್ದಿ

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ವಸ್ತು ಪ್ರದರ್ಶನಾಲಯದಲ್ಲಿ ಮಕ್ಕಳುಗಳ ಗೋಳು ಹೆಚ್ಚಿರುವುದಂತೆ.

ಂ ಂ

ಕೈತುಂಬಾ ನೋಟಿನುಗಳು ಸಿಕ್ಕದಿರುವುದೇ ಕಾರಣವಂತೆ.

ಂ ಂ

ಪಬ್ಲಿಕ್ ಫೋಕನನ್ನು ಉಪಯೋಗಿಸಲು ಕೆಲವರು ಹೋಗ್ತಾರಂತೆ.

ಂ ಂ

ಎಂಡಾಣೆ ಕೊಡಿರಿ ಎಂದಾಗ ಹಿಂದಿರುಗುವರಂತೆ.

ಂ ಂ

ವಸ್ತುಗಳ ಬೆಲೆ ಭೂಮಂಡಲವನ್ನೇ ಬೇಧಿಸುವಂತಿದೆಯಂತೆ.

ಂ ಂ

ಅದರೂ ಹೆಂಗಸರು ಬಳೆ ಅಂಗಡಿಗಳ ಮುಂದೆ ಮುಷ್ಕರ ಹೂಡುಲ್ಲವಂತೆ.

## ರೇಶನ್ ನಿಯಮ ಭಂಗ

ಮುಂಬಯಿಯಲ್ಲಿ ರೇಶನ್ ನಿಯಮ ಭಂಗ ಮಾಡಿ ಹೆಚ್ಚಿನ ಧಾನ್ಯ ಪಡೆದಿದ್ದಕ್ಕಾಗಿ ಮಿ. ಭಾತಿಜಾಂದ್ರ ತ್ರಿಭುವನದಾಸ ಮಿ. ಎಫ್. ಡಿಸಿಲ್ವಾ ಮತ್ತು ಆಂಡೇರಿಯ ನಿವಾಸಿಸ್ ಸೇಸಿಲಾ ಡಿಸ್ಸೋಜಾ ಇವರಿಗೆ ಅನುಕ್ರಮವಾಗಿ ೪೦ ರೂ ಮತ್ತು ೧೦ ರೂ. ಮತ್ತು ೨೫ ರೂ. ದಂಡ ವಿಧಿಸಿದರು.

## ಬಟ್ಟೆದಾನ

ಜಪಾನು ವಿಜಯೋತ್ಸವಗಳ ಸಂದರ್ಭದಲ್ಲಿ ಕಲ್ಕತ್ತೆಯಲ್ಲಿ ಗಂಡಸಿಗೆ ಒಂದು ಧೋತ್ರ ಹೆಂಗಸಿಗೆ ಒಂದು ಸೀರೆ ಪ್ರತಿಯೊಬ್ಬರಿಗೂ ಒಂದು ಗಾರಡು ಅಕ್ಕಿಯಂತೆ ಸರ್ಕಾರದವರು 1800 ಮಂದಿ ಬಡವರಿಗೆ ಹಂಚಿದರು.

## ಮಂಗಳಾರತಿ

ಮೈಸೂರು 9

ನಾಳೆ ಸಂಜೆ 7 ಘಂಟೆಗೆ ವೈಸ್ರಾಯಿ ರಸ್ತೆಯಲ್ಲಿರುವ ಆದಿಶಕ್ತಿ ಸಂಘದವರು ಶ್ರೀ ವಿದ್ಯಾಗಣಪತಿ ಮಂಗಳಾರತಿ ಮಾಡುವರು.

# ಹರ್ ಹೆಸ್ ಯುದ್ಧ ಪಾತಕಿ !

## ಜಪಾನರು ನೇಹ್ರೂರವರ ಸಲಹೆ ಕೇಳಿರುವರು !

## ಹೆಸ್ ಯುದ್ಧ ಪಾತಕಿ

ಬರ್ಲಿನ್ ಅ 7— ಹಿಟ್ಲರಿನ ಡೆಪ್ಯುಟಿ ಮತ್ತು 1941 ರಿಂದ ಬ್ರಿಟನ್ನಿನಲ್ಲಿ ಖೈದಿಯಾಗಿರುವ ಹೆಸ್ ಕೆಲ ದಿನಗಳಲ್ಲೇ ಜರ್ಮನಿಗೆ ಕಳಿಸಲ್ಪಡುವನು. ಇತರ 22 ಜರ್ಮನ್ ಯುದ್ಧ ಪಾತಕಿಗಳ ಜೊತೆಯಲ್ಲಿ ಇವನೂ ವಿಚಾರಣೆಗೆ ಒಳಪಡಿಸಲ್ಪಡುವನು.

## ಶ್ವೇತಪತ್ರಕ್ಕೆ ಖಂಡನೆ

### ಯಹೂದಿಗಳ ತೀರ್ಮಾನ

ಲಂಡನ್ ಅ 7 ನಾಳೆದಿವಸ ರಾಷ್ಟ್ರಗಳಲ್ಲಿನ ಯಹೂದ್ಯ ಸಾರ್ವಜನಿಕ ಸಭೆಗಳೂ ಪಾಲಿಸ್ಟೈನಿನಲ್ಲಿ 6 ಘಂಟೆಕಾಲ ಎಲ್ಲಾ ಕೆಲಸಗಳು ವ್ಯಾಪಾರ ವಾಹನ ಓಡಾಟ ನಿಲ್ಲಿಸಲೂ ತೀರ್ಮಾನಿಸಲಾಗಿ ಪಾಲಿಸ್ಟೈನಿನಲ್ಲಿ ಯಹೂದ್ಯರು ಹೋಗಿ ನೆಲೆಸಲು ಅಡ್ಡಿಪಡಿಸಲು ಶ್ವೇತಪತ್ರವನ್ನು ಖಂಡಿಸಲು ಈ ನಿರ್ಣಯ.

## ದಸ್ತಗಿರಿ

ಬೊಂಗಳೂರಿನ ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಹನುಮಂತಯ್ಯನವರು ಕೆಲದಿನಗಳ ಹಿಂದೆ ಸಾಗರದಲ್ಲಿ ಮಾಡಿದ ಭಾಷಣಕ್ಕಾಗಿ ಭಾರತ ರಕ್ಷಣಾ ಕಾನೂನಿನ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು.

—ಪೂನಾದಲ್ಲಿ 25 ಮೈಲಿ ಸೈಕಲ್ ರೇಸ್ ನಡೆದು ಮೊದಲನೆಯವನಾಗಿ ಬಂದ ಸಿಡ್ನಿ ಕೂರ್ಡರ್ 1 ಘಂಟೆ 8 ನಿಮಿಷ 11 ಸೆಕೆಂಡಿನಲ್ಲಿ ಮುಗಿಸಿದನು.

## ವಾರ್ತಾತರಂಗ

ಅಲಹಾಬಾದ್ ಅ 7 — ಲಕ್ನೋದಿಂದ ಬಂದಿರುವ ವಾರ್ತೆಯಂತೆ, ಜಪಾನೀಯರು ತಾವು ಮತ್ತೆ ಆತ್ಮಗೌರವ ಪಡೆಯಲು ಸಾಧನವನ್ನು ಸೂಚಿಸಬೇಕೆಂದು, ಪಂ॥ ಜವಹರಲಾಲರನ್ನು, ಅಮೇರಿಕಾ ಅಸೋಸಿಯೇಟೆಡ್ ಪ್ರೆಸ್ ಮೂಲಕ ಜಸ್ಟಾಸ್ಯೂಸ ವಿಜನ್ಸಿಯವರು ಕೇಳಿ ಟೆಲಿಗ್ರಾಂ ಕಳುಹಿಸಿರುವುದಾಗಿ ತಿಳಿಯಬಂದಿದೆ.

ಂ ಂ

ಪ್ಯಾಲಿಸ್ಟೈನಿನ ಸಮಸ್ಯೆ ಬಹು ಬಲವಾಗುತ್ತಿದೆ.

ಂ ಂ

ಸ್ವೀಡನ್ನಿನಿಂದ ಕಾಗದ, ಕೈನೇಯಿದ ಬಟ್ಟೆಗಳೂ, ರಿಫ್ರಿಗ್ರೇಟರುಗಳು ಮುಂತಾದುವು ತುಂಬಿರುವ ಹಡಗು ಭಾರತಕ್ಕೆ ಬರುತ್ತಲಿದೆ. ನವೆಂಬರಿನ ಒಳಗಾಗಿ ಬೊಂಬಾಯಿಗೆ ತಲಪುವುದು.

ಂ ಂ

ಬಿಜಾಪುರ ಜಿಲ್ಲಾ ಮ್ಯಾಜಿಸ್ಟ್ರೇಟರು ಬಾಗಲಕೋಟೆಯ ಮ್ಯುನಿಸಿಪಾಲಿಟಿ ಹದ್ದಿನಲ್ಲಿ ಮೋಟಾರಗಾಡಿಗಳು ಗಂಟೆಗೆ ೧೦ ಮೈಲಿಗಿಂತ ಹೆಚ್ಚಿಗೆ ವೇಗದಿಂದ ನಡೆಯಿಸಲ್ಪಡಕೂಡದೆಂದು ಅಪ್ಪಣೆ ಮಾಡಿದ್ದಾರೆ.

ಂ ಂ

ಹಿಂದೂಸ್ಥಾನ ಸರ್ಕಾರದವರು ಒಂದು ಅಪ್ಪಣೆ ಹೊರಡಿಸಿ ವ್ಯಾಪಾರಸ್ಥರು ಬಟ್ಟೆಯ ಗಂಟುಗಳನ್ನು ಕಟ್ಟುವದಕ್ಕೆ ಕಾಗದವನ್ನು ಉಪಯೋಗಿಸುವದರ ಮೇಲೆ ನಿರ್ಬಂಧವನ್ನು ಹಾಕಿದ್ದಾರೆ.

## ಮಗು ಮುರಾಟ ಆಗಿದ್ದು ಗೃಹಕೃತ್ಯ ಸಂಬಂಧವಾಗಿ

### ಚನ್ನಗಿರಿಯಲ್ಲಿ ಕ್ಷಾಮವಿಲ್ಲ

### ಸಚಿವರಿಂದ ಪರಿಶೀಲನೆ

ಚನ್ನಗಿರಿ ತಾಲ್ಲೂಕು ತ್ಯಾವಣಿಗಿಯಲ್ಲಿ ಐವತ್ತು ಸೇರು ಜೋಳಕ್ಕಾಗಿ ಮಗುವನ್ನು ಅನ್ಯ ಜಾತೀಯನಿಗೆ ಮಾರಿದನೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ತಪ್ಪು. ಸತ್ಯಾಂಶವು ಈಗ ಪ್ರಕಟವಾಗಿದೆ. ಮಗುವಿನ ತಂದೆಯು ಹೆಸರು ದುರ್ಗ ಎಂದು "ಕೂಲಿ ಸಿಕ್ಕದೆ ಉಪವಾಸ ಮಾಡಬೇಕಾಯಿತ. ಮಗು ಏನ ತಾಯಿ ನಿತ್ರಾಣಳಾಗಿದ್ದಳು; ಹಾಲು ಒತ್ತಿ ಹೋಗಿದ್ದಿತು. ಬಂಧುಗಳ ಮನೆಯಲ್ಲಿ ಮಗುವನ್ನು ಸಾಕಲು ಹೇಳಿದರೆ ಅವರುಗಳು ಒಪ್ಪಲಿಲ್ಲ. ಹೀರವ್ವ ಎಂಬುವಳು ತಾನು ಸಾಕುವುದಾಗಿ ತಿಳಿಸಿದಳು. ಸ್ವಲ್ಪ ಧನ ಸಹಾಯವೂ ದೊರೆಯಿತು. ಮಗುವನ್ನು ಅವಳ ವಶಕ್ಕೆ ಬಿಟ್ಟು ಹಣದಲ್ಲಿ ಐವತ್ತು ಸೇರಿನಷ್ಟು ಜೋಳ ಕೊಂಡೆ" ಎಂದು ದುರ್ಗ ಇನ್ನೂರು ಜನಗಳ ಮುಂದೆ ನುಡಿದ ಕೇವಲ ಗೃಹಕೃತ್ಯ ಸಂಬಂಧವಾಗಿ ಮಾಂದನೆಂದು ಹೇಳಲಾಗಿದೆ. ಅವನಿಗೆ ಐವತ್ತು ರೂಪಾಯಿಗಳ ಬೆಲೆ ಜಾಳಿನಷ್ಟು ಆಹಾರವನ್ನು ಕೊಡಿಸುವಂತೆ ಶ್ರೀ ಪುಲ್ಲರೆಡ್ಡಿಯರು ಏರ್ಪಡಿಸಿದ್ದಾರೆ.

ಂ ಂ

ಪ್ಯಾರಿಸ್ಸಿನಲ್ಲಿ ತಾ॥ ೭ರಲ್ಲಿ ಬ್ರಿಟಿಷ್ ವಿಮಾನ ಅಪಘಾತದಿಂದ 26 ಮಂದಿ ಸತ್ತರು.

ಂ ಂ

ಮೆಡಿಟೇರಿಯಾ ಸಮುದ್ರದಲ್ಲಿ ಸಮುದ್ರ ಕಳ್ಳರಕಾಟ ಹೆಚ್ಚಾಗಿದೆ.

ಂ ಂ

ಲಾಹೋರಿನಲ್ಲಿ ತಾ॥ 7ರಲ್ಲಿ ಮೌಲಾನಾ ಆಜಾದರು ಮುಸ್ಲಿಮರು ಕಾಂಗ್ರೆಸ್ ಹಾಕಿರುವ ಮಾರ್ಗವನ್ನು ಅನುಸರಿಸಿದರೆ ಅವರಿಗೆ ಶ್ರೇಯಸ್ಕರವೆಂದರು.

ಂ ಂ

ಕಲ್ಕತ್ತಾದಲ್ಲಿ ನಡೆದ ಅಖಿಲಭಾರತ ಸನಾತನೀ ಸಮ್ಮೇಳನದಲ್ಲಿ ದೇಶದ ವಿಭಾಗ ಮಾಡಕೂಡದೆಂದು ಹಿಂದೀರಾಷ್ಟ್ರ ಭಾಷೆಯೂಗಬೇಕೆಂದೂ ತೀರ್ಮಾನಿಸಿದರು.

ಂ ಂ

ಸುಪ್ರಸಿದ್ಧ ಸಿನಿಮಾ ತಾರೆ ಕುಮಾರಿ ಪದ್ಮಿನಿ ಇದೇ ತಿಂಗಳಲ್ಲಿ ಮೈಸೂರಿಗೆ ಆಗಮಿಸುವಳು.

## ದೀಪಗಳಹಬ್ಬ ಪ್ರಕಾಶಕ್ಕೆ

ಮಡಿಕಾಸಿನಲ್ಲಿಯೂ ಬೀದಿಗಳಲ್ಲಿ ದೀಪಗಳು ಕಡಿಮೆಯೆಂದು ಪ್ರಮಾಣದ ವಿದ್ಯುಚ್ಛಕ್ತಿಯ ಉಪಯೋಗದಿಂದ ಹೆಚ್ಚು ಕಾಂತಿ ಮಾಡುವುದಕ್ಕಾಗಿ ಮರ್ಕ್ಯುರಿ ವೇಪರ್ ದೀಪಗಳನ್ನು ಉಪಯೋಗಿಸಲು ಯೋಚಿಸಿರುವದು.

.....

## ಮಾಂಸಾಹಾರ — ಶಾಖಾಹಾರ

ಮಾಂಸಾಹಾರಿಯಾದ ಸಿಂಹವು ಒಂದು ಘರ್ಜನೆ ಮಾಡಿ ಕಳಗೆ ಬಿದ್ದ ಕೊಳ್ಳುವುದು. ಆದರೆ ಸಹನೆಯುಳ್ಳ ಎತ್ತು ತಿನ್ನುತ್ತಾ, ನಿದ್ದೆ ಮಾಡುತ್ತಾ ದಿನವೆಲ್ಲ ನಡೆಯುತ್ತಲೇ ಇರುತ್ತದೆ ಚುರುಕಾದಪಸಿಂಹವೆಂದು ಹೆಳಲ್ಪಡುವ ಅಮೇರಿಕಾ ದೇಶದವನು ಅನ್ನವನ್ನು ತಿಂದು ಜೀವಿಸುವ ಜೈನಾ ದೇಶದ ಕೂಲಿಯವನೊಂದಿಗೆ ಪೈಟಿಯಲ್ಲಿ ನಿಲ್ಲಲಾರನು. ಸೈನ್ಯಾಧಿಕಾರವು ಪ್ರಬಲವಾಗಿರುವವರೆವಿಗೂ ಮಾಂಸಾಹಾರ ಹೆಚ್ಚಿರುತ್ತದೆ. ಆದರೆ ವಿಜ್ಞಾನ ವಿಕಾಸವನ್ನು ಹೊಂದಿದಂತೆಲ್ಲಾ ಹೋರಾಟವು ನಿಲ್ಲುವುದು. ಆಗ ಶಾಖಾಹಾರಿಗಳು ಹೆಚ್ಚುವರು.

ಸ್ವಾಮಿ ವಿವೇಕಾನಂದ

## ಮೈಸೂರು ಸಿಟಿ ಮುನಿಸಿಪಾಲಿಟಿ

## ಸಿಟಿ ಮಾರ್ಕೆಟ್ ಪ್ರದರ್ಶನ

## ತಾ 13-10-1945

ಶನಿವಾರ ಬೆಳಿಗ್ಗೆ 8-30 ಘಂಟೆಯಿಂದ 12 ಘಂಟೆಯವರಿಗೆ ದೇವರಾಜ ಮಾರ್ಕೆಟ್ಟಿನಲ್ಲಿ ನಡೆಯುವುದು.

ಪ್ರವೇಶ: ಟಿಕೀಟು ಮೂಲಕ

## 0-2-0

ಉತ್ತಮ ಪ್ರದರ್ಶನಗಳಿಗೆ ಒಳ್ಳೆಯ ಬಹುಮಾನಗಳು.

ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿಯೂ, ದೇವರಾಜ ಮಾರ್ಕೆಟ್ ಆಫೀಸಿನಲ್ಲಿಯೂ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್
ಚೀಫ್ ಆಫೀಸರ್,
ಪ್ರೆಸಿಡೆಂಟ್.


## ನಮ್ಮ ಆರೋಗ್ಯ ಆನಂದದಾಯಕ

## ಜೀವಿತಕ್ಕೆ



ಸ್ಟೀಮರ್ ಮಾರ್ಕೀನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುತ್ತು ಒಡದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸಂಘದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್ಸ್,
(ಹಿಂಗು, ಕೇಸರಿ ಮಕ್ತು ಕಿರಾಣ ವ್ಯಾಪಾರಿಗಳು)
ಗಣಪತಿ ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮುದಲಾಸು.



## AT Opera—

## ಜವಾನ್

## From 10-10-45

ರಂಜಿಕ್, ಟಿ ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ

## ಶಾಲಿವಾಹನ

(ತಮಿಳು)

Morning Shows
From 11-10-45

## Tarzan Triumphs


Office of the Health officer
Mysore City,
Dated 6-10-1945.

## Notice

For the last one week, there are no cases of Plague in the city and the public are informed that there is no cause for anxiety. Precautionery measures are vigorously enforced to maintain the state of Public Health of the city in a satisfactory condition.

(Sd) B. Anantha Rao
Health Officer


## ನ್ಯೂ ಕೃಷ್ಣ ಟಾಕೀಸ್

ಮಾರ್ನಿಂಗ್ ಷೋ

ತಾ 11—10—45 ರಿಂದ

## "ಬಾಳಾಜಿ"

— ಅಥವಾ —

ತಿರುಪತಿ ವೆಂಕಟೇಶ ಮಹಾತ್ಮೆ


Edited, Printed and published by M. S. Krishna Rao, at the Satyavadi Press, Chamaraja Agrahar, Mysore

ಜವಾನ್ ಚಿತ್ರದ ದೃಶ್ಯ

ಆಮಶಂಕೆ
ಅತಿಸಾರಗಳಿಗೆ
.... ಮಾತ್ರೆ ....
ಗುಣಕಾರಿಯಾದ
## ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಬಾಲ್ ಅಂಡ್ ಕೊ.
ಟಿ. ಸಿ. ನಟೆರಾಜ್ ಅಂಡ್ ಕೊ.
— ಹುಣಸೂರು —
ಕಾಂತರಾಜ್ ಅಂಡ್ ಕೊ.
ರನ್ನೇ ಬೀದಿ, ಮೈಸೂರು.

## At Ranjit
## Humayun
## 5 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂನ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನಿಗಾರ್, ಷಾಹಿ ನವಾಬ್
ಪಾತ್ರವಹಿಸಿರುವರು


ಸತ್ಯವಾದಿ
ದಿನ ಪತ್ರಿಕೆ
ಸ್ಥಳದಲ್ಲಿ — ತಿಂಗಳಿಗೆ ರೂ.